**ಸಾಕ್ಷಿಯನ್ನು ದಿನಾಂಕಃ 06-07-2019 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**
**ಮುಂದುವರಿದ ಪಾಟೀ ಸವಾಲುಃ- ಶ್ರೀ ಡಿ ಜಿ ಟಿ ವಕೀಲರಿಂದಃ**

5. ನಾನು 5ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ಈ ದಾವೆಯನ್ನು 2 ಎಕರೆ 27 ಗುಂಟೆಗೆ ಹಾಕಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂದಸಿದಂತೆ ಕರಾರು ಪತ್ರ ಆಗುವುದಕ್ಕೂ ಮೊದಲು ದಾಖಲೆ ಪರಿಶೀಲಿಸಿದ್ದೀರಾ ಎಂದರೆ ಇಲ್ಲ. ದಾವಾ ಸ್ವತ್ತು ರಾಧ, ಮಾರುತಿ ಹಾಗೂ ರಾಜಣ್ಣ ಅಂದರೆ ಇಲ್ಲಿನ ಪ್ರತಿವಾದಿಗಳ ಹೆಸರಿನಲ್ಲಿತ್ತು. ಸ.ನಂ.33 ಕ್ಕೆ ಸಂಬಂದಸಿದಂತೆ ಅವರ ಹೆಸರಿನಲ್ಲಿ ದಾಖಲೆ ಇತ್ತು. ಯಾವ ಯಾವ ದಾಖಲೆ ಪ್ರತಿವಾದಿಗಳ ಹೆಸರಿನಲ್ಲಿತ್ತು ಎಂದರೆ ಅವರ ಹೆಸರಿನಲ್ಲಿ ವಿಲ್ ಆಗಿದ್ದು ಅದರ ಅಧಾರದ ಮೇಲೆ ನನಗೆ ಕ್ರಯ ಮಾಡಿದ್ದಾರೆ ಎನ್ನುತ್ತಾರೆ. ಮಾತುಕತೆಯ ದಿನ ವಿಲ್ ದಾಖಲೆಯನ್ನು ಇಟ್ಟುಕೊಂಡಿದ್ದರು. ಮಾತುಕತೆ ಆದ ದಿನದಿಂದ 15 ದಿನದ ನಂತರ ಕರಾರು ಪತ್ರ ಮಾಡಿಕೊಡಬೇಕೆಂದು ಒಪ್ಪಂದವಾಗಿತ್ತು. ನಮ್ಮ ಕುಟುಂದಲ್ಲಿ ನಾವು 5 ಜನ ಅಣ್ಣತಮ್ಮಂದಿರಿದ್ದೇವೆ. ಎಲ್ಲರೂ ಬೇರೆ ಬೇರೆ ಇದ್ದೇವೆ. ನನ್ನ ಭಾಗದ ಆಸ್ತಿ 3 ಎಕರೆ ಬರಬಹುದು. ಅದು ದಿಣ್ಣೆ ಜಮೀನು ಆಗಿರುತ್ತದೆ. ಅದರಿಂದ ಸುಮಾರು ರೂ.20,000/- ಆದಾಯ ಬರುತ್ತದೆ ಎಂದರೆ ಸರಿ. ಅದರಲ್ಲಿ ರೂ.10,000/- ಉಳಿಸಬಹುದು. ಅದೇ ಹಣದಲ್ಲಿ ನಾವು ವರ್ಷವಿಡಿ ಜೀವನ ಮಾಡಬೇಕು ಎಂದರೆ ಸರಿ. ನನ್ನ ವ್ಯವಸಾಯದ ಆಧಾರದಿಂದ ಹಣ ಉಳಿಸಲು ಸಾಧ್ಯವಿಲ್ಲ ಎಂದರೆ ಸರಿ. ವ್ಯವಸಾಯ ಬಿಟ್ಟು ನನಗೆ ಬೇರೆ ಆದಾಯ ಇಲ್ಲ ಎಂದರೆ ಸಾಕ್ಷಿ ಕೂಲಿ ನಾಲಿ ಮಾಡುತ್ತೇನೆ ಎನ್ನುತ್ತಾರೆ. ಕೂಲಿನಾಲಿಯ ಹಣ ಸಹ ನನ್ನ ಜೀವನಕ್ಕೆ ಸರಿ ಹೋಗುತ್ತದೆ ಎಂದರೆ ಸರಿ.

6. ನಿಪಿ-1 ಕ್ಕೆ ಪತ್ರವನ್ನು 1ನೇ ಪ್ರತಿವಾದಿ ತಂದಿದ್ದರು. ಮುದ್ದೆಗೌಡ ಎನ್ನುವವರು ನಮ್ಮ ಎದುರು ಸದರಿ ಪತ್ರವನ್ನು ಬರೆದಿರುತ್ತಾರೆ. ಮುದ್ದೆಗೌಡರು ವಿಲ್ ಆಧಾರದ ಮೇಲೆಯೇ ಕರಾರು ಪತ್ರವನ್ನು ಬರೆದಿರುತ್ತಾರೆ. ಅದನ್ನು ಬರೆಯುವ ಸಮಯದಲ್ಲಿ 3 ಜನ ಪ್ರತಿವಾದಿಗಳು ಹಾಗೂ ಸಾಕ್ಷಿದಾರರು ಇದ್ದರು. ಚೈತ್ರಾ ಮತ್ತು ರವೀಶ್ ರವರ ಬಗ್ಗೆಯೂ ಕರಾರು ಪತ್ರದಲ್ಲಿ ಬರೆದಿದ್ದಾರಾ

ಎಂದರೆ ವಿಲ್‌ನಲ್ಲಿ ಪ್ರತಿವಾದಿಗಳ ಹೆಸರು ಮ್ರಾ ಇದ್ದ ಕಾರಣ ಚೈತ್ರಾ ಮತ್ತು ರವೀಶ್‌ರವರ ಹೆಸರು ಬರೆದಿಲ್ಲ. ಮುದ್ದೆಗೌಡರು ಪತ್ರವನ್ನು ಬರೆದು ಸಹಿ ಮಾಡುವಾಗ ನಾನು ಹಾಜರಿದ್ದೆ. ಅವರೆಲ್ಲರೂ ಒಂದೇ ಪೆನ್ನಿನಲ್ಲಿ ನಿಪಿ-1 ಕ್ಕೆ ಸಹಿ ಮಾಡಿರುತ್ತಾರೆ. ಪ್ರತಿವಾದಿಗಳು ದಿಃ04.02.2011 ರಂದು ಕೊರಟಗೆರೆಗೆ ಬಂದಿರಲಿಲ್ಲ ಎಂದರೆ ಸುಳ್ಳು. ನಿಪಿ-1 ನ್ನು ನನ್ನ ಪರವಾಗಿ ಅವರು ಮಾಡಿಕೊಟ್ಟಿಲ್ಲ ಎಂದರೆ ಸುಳ್ಳು. ನಿಪಿ-1 ನ್ನು ನನ್ನ ಹೆಸರಿಗೆ ಬರೆದುಕೊಡಲು ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಇರಲಿಲ್ಲ ಎಂದರೆ ಸುಳ್ಳು. 1ನೇ ಪ್ರತಿವಾದಿ ಕನಡದಲ್ಲಿ ಹಾಗೂ ಉಳಿದ ಇಬ್ಬರು ಪ್ರತಿವಾದಿಗಳು ಇಂಗ್ಲೀಷ್‌ನಲ್ಲಿ ನಿಪಿ-1 ಕ್ಕೆ ಸಹಿ ಮಾಡಿದ್ದಾರೆ. ನಿಪಿ-1ರಲ್ಲಿರುವ ಸಹಿಗಳನ್ನು ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಸದರಿ ಪತ್ರ ನನ್ನ ಎದುರು ತಿದ್ದುಪಡಿ ಆಗಿರಲಿಲ್ಲ. ಸುಮಾರು 3-4 ಸಾರಿ ನಾನು ಪ್ರತಿವಾದಿಗಳಿಗೆ ಕ್ರಯಪತ್ರ ಮಾಡಿಕೊಡಿ ಎಂದು ಕೇಳಿರುತ್ತೇನೆ. ಅವರು ಕರೆದಾಗ ಬರಲಿಲ್ಲ. ಇಂತಹ ದಿನ ನಾನು ಕ್ರಯಪತ್ರ ಪಡೆಯಲು ಹಾಜರಿರುತ್ತೇನೆ ಎಂದು ಬರೆಸಿದ್ದೀರಾ ಎಂದರೆ ಬರೆಸಿಲ್ಲ. ಪ್ರತಿವಾದಿಗಳಿಗೆ ನೋಟೀಸ್ ನೀಡಿದ ಮೇಲೆ ಇಲ್ಲಿಯವರೆಗೂ ನಾನು ಒಂದು ದಿನವೂ ನಾನು ನೋಂದಣಾಧಿಕಾರಿಗಳ ಕಚೇರಿಯ ಬಳಿ ಹೋಗಿಲ್ಲ ಎಂದರೆ ಸರಿ.

7. ಈರಮ್ಮ ಎಂಬುವವರನ್ನು ನಾನು ನೋಡಿರುತ್ತೇನೆ. ಇಲ್ಲಿನ ಪ್ರತಿವಾದಿಗಳು ಹಾಗೂ ಅವರ ಸಹೋದರ ಸಹೋದರಿಯರು ಆರ್.ನಾರಾಯಣ್ ಎಂಬುವವರ ಹೆಸರಿನಲ್ಲಿ ದಿಃ25.08.2008 ರಲ್ಲಿ ದಾವಾ ಸ್ವತ್ತಿನ ಬಗ್ಗೆ ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಅವರಿಂದ ನಾಲ್ಕು ಲಕ್ಷ ಪಡೆದು ಕರಾರು ಪತ್ರ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳು ಕ್ರಯಪತ್ರ ಮಾಡಿಕೊಡದೆ ಇದ್ದ ಕಾರಣ ನಾರಾಯಣ್‌ರವರು ಮಾನ್ಯ ಮಧುಗಿರಿ ನ್ಯಾಯಾಲಯದಲ್ಲಿ ಒಂದು ದಾವೆ ಸಂಖ್ಯೆ27/2016 ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆ ನಾರಾಯಣ್‌ರವರ ಪರ ಡಿಕ್ರಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಮೊದಲೆ ನಾರಾಯಣ್ ಎಂಬುವರಿಗೆ ಮಾರಾಟ ಮಾಡಿದ್ದ ಕಾರಣ ನನ್ನ ಹೆಸರಿನಲ್ಲಿ ಪ್ರತಿವಾದಿಗಳು ಯಾವುದೆ ಕರಾರು ಪತ್ರ ಮಾಡಿಕೊಟ್ಟಿಲ್ಲ

ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಕರಾರು ಪತ್ರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇರುತ್ತದೆ.

ಸಿ.ಜೆ. ಮತ್ತು ಪ್ರ.ದ.ನ್ಯಾ.ದಂ.
ಕೊರಟಗೆರೆ

ಓ.ಎಸ್. ನಂ.259/2013
ಪಿ ಡಬ್ಲ್ಯೂ-1